| Form No.4 (Civil) Deposition Sheets (R.P.No.57) |
|---|

# ವಿಶೇಷ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ

## ಸ್ಪೆಷಲ್.ಸಿ. ಸಂಖ್ಯೆ: 3/2014

ಪ್ರಾ.ಸಾ. 1 ಚಾ.ಸಾ. 1

| | | |
|---|---|---|
| ಹೆಸರು | : | ಮಹ್ಮದ ಇಸ್ಮಾಯಿಲ್ |
| ತಂದೆಯ ಹೆಸರು | : | ಮಹ್ಮದ ಇಬ್ರಾಹಿಂ ಖಲಿಲ ತಿಮ್ಮಾಪೂರ |
| ವಯಸ್ಸು | : | 48 ವರ್ಷ |
| ಉದ್ಯೋಗ | : | ಎಲ್ಟ್ರಿಕಲ್ ವರ್ಕ |
| ವಾಸ | : | ಆದಿಲಪೂರ ಶಹಾಪೂರ |

ಪ್ರಮಾಣ ವಚನ ಭೋಧಿಸಿದ ದಿನಾಂಕ: 02-08-2024
ಮುಖ್ಯ ವಿಚಾರಣೆ ವಿಶೇಷ ಸರಕಾರಿ ಅಭಿಯೋಜಕರಿಂದ

ಬೆನಕನಳ್ಳಿ (ಜೆ) ಗ್ರಾಮದ ಸರ್ವೆ ನಂ. 13 ರಲ್ಲಿ 6 ಎಕರೆ 2 ಗುಂಟೆ ಜಾಗಿರ ಜಮೀನು ಇರುತ್ತದೆ. ಅದರಲ್ಲಿ 15 ವರ್ಷಗಳ ವರೆಗೆ ಪರಬಾರೆ ಮಾಡಬಾರದು ಎಂದು ನಿಬಂಧನೆ ಇತ್ತು. ಸದರಿ ನಿಬಂಧನೆ ಹಳೆ ಪಹಣಿಯಲ್ಲಿ ಇತ್ತು. ಆ ನಿಭಂದನೆಯನ್ನು ತೆಗೆಯಬೇಕು ಎಂದು ತಹಶೀಲ್ದಾರ ಶಹಾಪೂರ ಅವರ ಕಛೇರಿಗೆ ನಮ್ಮ ತಂದೆ ಅರ್ಜಿ ಕೊಟ್ಟಿದ್ದರು. ನಮ್ಮ ತಂದೆ ಮತ್ತು ನಮ್ಮ ದೊಡ್ಡಪ್ಪ ಇಬ್ಬರ ಜಂಟಿ ಹೆಸರಿನಲ್ಲಿ ಆ ಜಮೀನು ಇತ್ತು. ಪಹಣಿ ಪತ್ರಿಕೆ ಕಾಲಂ. ನಂ.11 ರಲ್ಲಿ ಈ ಬಗ್ಗೆ ಶರ ಇತ್ತು. ಆರೋಪಿ ಕಛೇರಿಯಲ್ಲಿ ಇದ್ದು ನನ್ನನ್ನು ಹಲವಾರು ಬಾರಿ ಕರೆಯಿಸಿಕೊಂಡಿದ್ದರು. 4,000/- ರೂಪಾಯಿ ಹಣವನ್ನು ಕೆಲಸ ಮಾಡಬೇಕಾದರೆ ಕೊಡಬೇಕಾಗುತ್ತದೆ ಎಂದು ಹೇಳಿದ. ನಮ್ಮ ತಂದೆಯನ್ನು ಕೇಳಿ ಕೊಡುತ್ತೇನೆ ಎಂದು ವಾಪಾಸ ಬಂದೆ. ನಾನು ಈ ವಿಷಯವನ್ನು ನಮ್ಮ ಸ್ನೇಹಿತರಿಗೆ ಹೇಳಿದ್ದು ಅವರು ಯಾದಗಿರಿ ಲೋಕಾಯುಕ್ತ ಕಛೇರಿಗೆ ಹೋಗಿ ಮಾಹಿತಿ ಕೊಡುವಂತೆ ಹೇಳಿದರು. ನಂತರ ನಾನು ಅರ್ಜಿ ಬರೆದುಕೊಂಡು ಯಾದಗಿರಿ ಲೋಕಾಯುಕ್ತ ಕಛೇರಿಗೆ ಬಂದೆ. ನಾನು ಲೋಕಾಯುಕ್ತ ಪೊಲೀಸರಿಗೆ ದೂರಿನ ಬಗ್ಗೆ ವಿಷಯ ತಿಳಿಸಿದೆ. ಲೋಕಾಯುಕ್ತ ಪೊಲೀಸರು ನನಗೆ ವೈಸ ರಿಕಾರ್ಡರ ಕೊಟ್ಟು ಆರೋಪಿಯನ್ನು ಮಾತನಾಡಿಸಿ ರಿಕಾರ್ಡ ಮಾಡಿಕೊಂಡು ಬರುವಂತೆ ಹೇಳಿದರು. ನಂತರ ನಾನು ಆರೋಪಿಯ ಕಛೇರಿಗೆ ಹೋಗಿ ಆತನನ್ನು ಕೇಳಿದ್ದಕ್ಕೆ ಆರೋಪಿ 4,000/- ರೂಪಾಯಿ ಕೊಟ್ಟರೆ ಕೆಲಸ ಮಾಡಿಕೊಡುತ್ತೇನೆ ಎಂದು ಹೇಳಿದ್ದು ನಾನು ಬಡವನಿದ್ದೇನೆ ಎಂದು ಹೇಳಿದ್ದಕ್ಕೆ 500/- ರೂಪಾಯಿ ಕಡಿಮೆ

ಕೊಡು ಎಂದು ಹೇಳಿದ ನಂತರ ನಾನು ಯಾದಗಿರಿ ಲೋಕಾಯುಕ್ತ ಕಛೇರಿಗೆ ಬಂದೆ. ವೈಸ ರಿಕಾರ್ಡರನ್ನು ಪೊಲೀಸರಿಗೆ ಕೊಟ್ಟೆ. ನಾನು ದೂರನ್ನು ಕೊಟ್ಟಿರುತ್ತೇನೆ. ಸದರಿ ದೂರನ್ನು ನಿ.ಪಿ.1 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.1(ಎ) ಎಂದು ಗುರುತಿಸಲಾಯಿತು. ಸದರಿ ದೂರನ್ನು ದಿನಾಂಕಃ 16-03-2014 ರಂದು ಕೊಟ್ಟಿರುತ್ತೇನೆ. ಸದರಿ ದೂರಿನ ಆಧಾರದ ಮೇಲೆ ಕೇಸ ರಜಿಸ್ಟರ ಮಾಡಿದ್ದು ಪ್ರ.ವ.ವರದಿಯನ್ನು ನಿ.ಪಿ.2 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.2(ಎ) ಎಂದು ಗುರುತಿಸಲಾಯಿತು. ನಂತರ ಲೋಕಾಯುಕ್ತ ಪೊಲೀಸರು ಇಬ್ಬರು ಪಂಚರನ್ನು ಕರೆಯಿಸಿದರು.

ಸಾಕ್ಷಿಯ ಕೋರಿಕೆಯ ಮೇರೆಗೆ ಮುಂದುವರೆದ ಮುಖ್ಯ ವಿಚಾರಣೆಗಾಗಿ ಕಾಲವಕಾಶ ನೀಡಲಾಯಿತು.

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಯಾದಗಿರಿ.